

# ಚಂದನವನದ ಮಾಹಿತಿಜೇನು

■ ಎಂ.ಆರ್. ಮಂಜುನಾಥ್



ಬೇಸರ ಕಳೆಯಲು, ಮನಸ್ಸನ್ನು ಉಲ್ಲಾಸವಾಗಿಟ್ಟುಕೊಳ್ಳಲು ಕೆಲವರು ಕೆಲವೊಂದು ಹವ್ಯಾಸಗಳನ್ನು ರೂಢಿಸಿಕೊಳ್ಳುತ್ತಾರೆ. ಎಂಬತ್ತರ ಹರೆಯದ ಗೋವಿಂದರಾಜು ಅವರಿಗೆ ಸಿನಿಮಾ ನೋಡುವುದು ಒಂದು ಹವ್ಯಾಸ. ಅಷ್ಟೇ ಅಲ್ಲ, ಸಿನಿಮಾಗೆ ಸಂಬಂಧಿಸಿದ ವಿಷಯಗಳನ್ನು ಸಂಗ್ರಹಿಸಿಡುವುದು ಅವರಿಗೆ ಖುಷಿ ಕೊಡುವ ಚಟುವಟಿಕೆ.

ಕನ್ನಡ ಸಿನಿಮಾಪ್ರೇಮಿ ಆಗಿರುವ ಗೋವಿಂದರಾಜು ಅವರು ನಂಜನಗೂಡು ತಾಲ್ಲೂಕಿನ ಹುಲ್ಲಳ್ಳಿ ಗ್ರಾಮದವರು. ಸಣ್ಣ ವಯಸ್ಸಿಗೇ ಸಿನಿಮಾ ಬಗ್ಗೆ ಕುತೂಹಲ ಬೆಳೆಸಿಕೊಂಡಿದ್ದ ಇವರು, ಮೂಕಿ ಟಾಕಿ ಸಿನಿಮಾದಿಂದ ಹಿಡಿದು ಇಲ್ಲಿಯವರೆಗೆ ತಮ್ಮ ಗಮನಸೆಳೆದಿರುವ ಹಾಗೂ ತಾವು ನೋಡಿರುವ ಸಿನಿಮಾಗಳ ಹೆಸರು, ದಿನಾಂಕ, ಕಲಾವಿದರು, ತಂತ್ರಜ್ಞರ ಹೆಸರುಗಳನ್ನು ಹಾಳೆಗಳಲ್ಲಿ ಬರೆದಿಡುವ ಹವ್ಯಾಸ ರೂಢಿಸಿಕೊಂಡಿದ್ದಾರೆ. ಹಳೆಯ ಸಿನಿಮಾ ಪತ್ರಿಕೆಗಳಿಂದ ಸ್ವಾರಸ್ಯಕರ ಸುದ್ದಿಗಳನ್ನು ಸಂಗ್ರಹಿಸಿದ್ದಾರೆ. ಸಿನಿಮಾ ಹಾಡಿನ ಪುಸ್ತಕ, ದಿನಪತ್ರಿಕೆಗಳಲ್ಲಿ ಬರುತ್ತಿದ್ದ ಸಿನಿಮಾ ಪುಟಗಳ ದೊಡ್ಡ ಸಂಗ್ರಹವೇ ಇವರ ಬಳಿಯಿದೆ.

> ಗೋವಿಂದರಾಜು ಅವರಿಗೆ ಸಿನಿಮಾ ಎಂದರೆ ಆಕರ್ಷಣೆ. ಸಿನಿಮಾ ಸುದ್ದಿಗಳ ದೊಡ್ಡ ಸಂಗ್ರಹವೇ ಇವರ ಬಳಿಯಿದೆ.

1966ರಿಂದ ಕನ್ನಡ ಸಿನಿಮಾರಂಗವನ್ನು ಕಾಣುತ್ತಾ ಬಂದಿರುವ ಇವರು, ಬಿಡುಗಡೆಯಾಗಿರುವ ಬಹಳಷ್ಟು ಸಿನಿಮಾಗಳನ್ನು ನೋಡಿದ್ದಾರೆ. ‘ಹತ್ತು ಪೈಸೆಯಿಂದ ಒಂದು ರೂಪಾಯಿ ಟಿಕೆಟ್ ಇದ್ದಾಗಿನಿಂದಲೂ ಸಿನಿಮಾ ಟೆಂಟ್‌ಗಳಲ್ಲಿ ಸಿನಿಮಾ ನೋಡಿ ಆನಂದಿಸಿದ್ದೇನೆ. ಈಗ ಟಿಕೆಟ್ ಬೆಲೆ ದುಬಾರಿ ಆಗಿರುವುದರಿಂದ ಯೂಟ್ಯೂಬ್‌ನಲ್ಲಿ ಕೆಲವು ಸಿನಿಮಾಗಳನ್ನು ನೋಡುತ್ತಿದ್ದೇನೆ’ ಎನ್ನುವ ಇವರ ಬಳಿ ಹಳೆಯ ಸಿನಿಮಾ ಕಲಾವಿದರ ಮಾಹಿತಿ ಸಾಕಷ್ಟಿದೆ.

ಇಳಿ ವಯಸ್ಸಿನಲ್ಲೂ ತಮ್ಮ ಸಂಗ್ರಹ ಕಾರ್ಯವನ್ನು ಗೋವಿಂದರಾಜು ನಿಲ್ಲಿಸಿಲ್ಲ. ಈಗಲೂ ತಮಗಿಷ್ಟವಾಗುವ ಸಿನಿಮಾ ಸುದ್ದಿಗಳನ್ನು ಸಂಗ್ರಹಿಸುತ್ತಿದ್ದಾರೆ. ‘ಸಿನಿಮಾರಂಗದವರು ನನ್ನ ಬಳಿಯಿದ್ದ ಸಂಗ್ರಹಗಳು, ಮಾಹಿತಿ ಪಡೆದು ಚಿತ್ರರಂಗದ ಮಾಹಿತಿ ಪುಸ್ತಕ ಬಿಡುಗಡೆ ಮಾಡಿದರು. ಆದರೆ ಅದರಲ್ಲಿ ನನ್ನ ಹೆಸರು ಎಲ್ಲಿಯೂ ಇರಲಿಲ್ಲ. ಬೇಸರವೇನೂ ಇಲ್ಲ. ಸಿನಿಮಾ ಸುದ್ದಿ ಸಂಗ್ರಹವನ್ನು ನಾನು ಎಂದಿಗೂ ಬಿಡುವುದಿಲ್ಲ’ ಎಂದು ನಗುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in


